ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

**ಕರ್ನಾಟಕ ವಿಧಾನ ಪರಿಷತ್ತು**

ನೂರ ನಲವತ್ತೊಂದನೆಯ ಅಧಿವೇಶನ

ಮಂಗಳವಾರ, ದಿನಾಂಕ: 22ನೇ ಸೆಪ್ಟಂಬರ್, 2020

ಅಡುಗೆ ಎಣ್ಣೆ ಘಟಕಗಳ ಕುರಿತು

ಶ್ರೀ ಆರ್. ಪ್ರಸನ್ನ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-

212 (174) ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿ ಅಡುಗೆಗೆ ಬಳಸುವ ಅಡುಗೆ ಎಣ್ಣೆ ತಯಾರಿಸುವ ಘಟಕಗಳೆಷ್ಟು; ಕೆಲವು ಘಟಕಗಳಲ್ಲಿ ತಯಾರಿಸುತ್ತಿರುವ ಎಣ್ಣೆಯಲ್ಲಿ ಮಿಕ್ಸಿಂಗ್ ಇರುವುದನ್ನು ವಾಹಿನಿಗಳು ಸಮಗ್ರವಾಗಿ ಚಿತ್ರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಸರ್ಕಾರ ಎಲ್ಲಾ ತಯಾರಿಕ ಸಂಸ್ಥೆಗೆ ಪರವಾನಗೆಯನ್ನು ನೀಡಿದೆಯೇ; ಸರ್ಕಾರ ಎಲ್ಲಾ ತಯಾರಿಕಾ ಸಂಸ್ಥೆಗೆ ಆಕಸ್ಮಿಕವಾಗಿ ಭೇಟಿ ನೀಡಿ ಪರಿಶೀಲಿಸಿದೆಯೇ; 2020 ವರ್ಷದಲ್ಲಿ ಎಷ್ಟು ಸಂಸ್ಥೆಗಳನ್ನು ಪರಿಶೀಲಿಸಲಾಗಿದೆ; ಯಾವ ಸಂಸ್ಥೆಯವರ ಮೇಲೆ ಇದುವರೆಗೆ ಯಾವ ಕ್ರಮ ಜರುಗಿಸಲಾಗಿದೆ; ಈ ಕಲಬೆರಕೆ ದಂಧೆ ತಡೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

(ಇ) ಪರವಾನಗೆ ನೀಡಿದ ಘಟಕಗಳಲ್ಲಿ ಕಲಬೆರಕೆ ಅಡುಗೆ ಎಣ್ಣೆ ತಯಾರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಈ) ಆಹಾರ ಇಲಾಖೆಯವರು ಶಿವಮೊಗ್ಗ ನಗರದಲ್ಲಿ ಎಷ್ಟು ಅಂಗಡಿಗಳಿಗೆ ಹಾಗೂ ಹೋಟೆಲ್‌ಗಳಿಗೆ ಭೇಟಿ ನೀಡಿ ಅಡುಗೆಗೆ ಬಳಸುವ ಎಣ್ಣೆಗಳನ್ನು ಪರೀಕ್ಷೆಗೆ ಒಳಪಡಿಸಿದ್ದಾರೆ; ಇದರಿಂದ ಕಂಡುಬಂದ ಅಂಶಗಳೇನು ?